# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3372 /2022

**ಚಾಸಾ ಃ- 03 / ಪ್ರಾಸಾ ಃ- 03**

| | |
|---|---|
| ಹೆಸರು | ಇಂದಿರ |
| ಗಂಡನ ಹೆಸರು | ನರಸೇಗೌಡ |
| ವಯಸ್ಸು | 52 |
| ಉದ್ಯೋಗ | ಗೃಹಿಣಿ |
| ವಿಳಾಸ | ಗೊಲ್ಲರಹಟ್ಟಿ , ಬೆಂಗಳೂರು |

**ದಿನಾಂಕಃ 28.06.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ರವರು ನನ್ನ ಮಗಳು ಹಾಗೂ ಚಾಸಾ-2 ರವರು ನನ್ನ ಯಜಮಾನರು ಇರುತ್ತಾರೆ. ಚಾಸಾ- 4 ರಿಂದ 10 ರವರ ಪರಿಚಯ ಇರುತ್ತದೆ. ಆರೋಪಿಗಳು ಪರಿಚಯ ಇರುತ್ತಾರೆ. ಚುಂಚನಗಿರಿಯಲ್ಲಿ ಚಾಸಾ-1 ರವರಿಗೆ 1 ನೇ ಆರೋಪಿಗೆ ಕೊಟ್ಟು ವಿವಾಹ ಮಾಡಿಕೊಟ್ಟಿರುತ್ತೇವೆ. ವಿವಾಹವಾದ ಸ್ವಲ್ಪ ದಿನಗಳ ಕಾಲ ಚಾಸಾ-1 ಹಾಗೂ 1 ನೇ ಆರೋಪಿಯು ಚೆನ್ನಾಗಿ ಇದ್ದರು . ಹಾಗೂ ಸದರಿಯವರು ಬೆಂಗಳೂರಿನಲ್ಲಿ ನಮ್ಮ ಮನೆಯಲ್ಲೆ ಇದ್ದರು. ಸ್ವಲ್ಪ ದಿನಗಳ ನಂತರ 1 ನೇ ಆರೋಪಿಯು ಚಾಸಾ- 1 ರವರಿಗೆ dominate ಮಾಡಲು ಪ್ರಯತ್ನ ಪಟ್ಟಿರುತ್ತಾರೆ. ನಂತರ 1 ನೇ ಆರೋಪಿಯು ನಮಗೆ ಹೊಂದಾಣಿಕೆ ಆಗಲಿಲ್ಲ. ನಂತರ ನೀವು ಪ್ರತ್ಯೇಕವಾಗಿ ವಾಸ ಇರಿ ಎಂದು ಮಾಗಡಿಯಲ್ಲಿ ಮನೆ ಮಾಡಿಕೊಟ್ಟಿರುತ್ತೇವೆ. ಮನೆಯನ್ನು ಮಾಡಿಕೊಂಡ ನಂತರ

1 ನೇ ಆರೋಪಿಯು ಚಾಸಾ- 1 ರವರಿಗೆ ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾರೆ. ಚಾಸಾ-1 ರವರ ಸಂಬಳ ಬಂದ ತಕ್ಷಣ 1 ನೇ ಆರೋಪಿಯು ತನ್ನ ಖಾತೆಗೆ ಹಾಕಿಸಿಕೊಳ್ಳುತ್ತಿದ್ದರೂ, ಹಾಗೂ ಮದುವೆಯ ಮುಂಚೆಯೂ ಹಾಕಿಸಿಕೊಂಡಿರುತ್ತಾರೆ ನನಗೆ ಗೊತ್ತಿದ್ದಿರಲಿಲ್ಲ. ಚಾಸಾ-1 ರವರಿಗೆ 1 ನೇ ಆರೋಪಿಯು ಹೋಗಿ ಮನೆಯಲ್ಲಿ ಹಣ ಕೇಳು ಎಂದು ತುಂಬಾ ಹಿಂಸೆ ನೀಡುತ್ತಿದ್ದರು. ಬೆಂಗಳೂರಿನಲ್ಲಿ ಇರುವ ನಿಮ್ಮ ಮನೆಯನ್ನು ಬರೆಸಿಕೊಂಡು ಬಾ ಇಲ್ಲದಿದ್ದರೆ 3 ಲಕ್ಷ ಹಣ ತೆಗೆದುಕೊಂಡು ಬಾ ಎಂದು ಹಾಗೂ ಇಲ್ಲದಿದ್ದರೆ ಜಮೀನು ಬರೆಸಿಕೊಂಡು ಬಾ ಎಂದು ಹಿಂಸೆ ನೀಡುತ್ತಿದ್ದರು. ನಂತರ ಸದರಿ ವಿಷಯವು ಚಾಸಾ-1 ರವರಿಂದ ನಮಗೆ ಗೊತ್ತಾಗಿರುತ್ತದೆ. ಆಗ ನಾವು ಕೇಳಿದ್ದಕ್ಕೆ ಚಾಸಾ-2 ರವರಿಗೆ ಹಲ್ಲೆ ಮಾಡಿರುತ್ತಾರೆ. ನಾವು ನಮ್ಮ ಮಗನ ಸ್ಮಾರಕವನ್ನು ಬೆಳಗುಂಭದಲ್ಲಿ ಕಟ್ಟುತ್ತಿದ್ದೆವು ಆ ಹಣವೂ ಬೇಕು ಎಂದು ಗಲಾಟೆ ಮಾಡಿರುತ್ತಾರೆ. ನಂತರ ನಮ್ಮ ಮಗಳು ನಮ್ಮ ಜೊತೆಯೆ ಬಂದಿರುತ್ತಾರೆ. ನಾವು 2 ಮತ್ತು 3 ನೇ ಆರೋಪಿಯನ್ನು ಕರೆದಿರುತ್ತೇವೆ ಆಗಲೂ ಸಹ 2 ಮತ್ತು 3 ನೇ ಆರೋಪಿಗಳು ಬಂದಿರುವುದಿಲ್ಲ. ಆರೋಪಿಗಳು ಫೋನಿನಲ್ಲಿ ಚಾಸಾ-1 ರವರಿಗೆ ಬೆದರಿಕೆ ಹಾಕುತ್ತಿದ್ದರು. ಚಾಸಾ-1 ರವರು ಬೆಂಗಳೂರಿನಲ್ಲೆ ಕ್ಲೀನಿಕ್ ಗೆ ಕೆಲಸಕ್ಕೆ ಹೋಗುತ್ತಿದ್ದರು. 1 ನೇ ಆರೋಪಿಯು ಸದರಿ ಕ್ಲೀನಿಕ್ ಹತ್ತಿರವೂ ಹೊಗಿ ಗಲಾಟೆ ಮಾಡುತ್ತಿದ್ದರು. ಹಾಗೂ ಮಾಲೀಕರಿಗೆ ಚಾಸಾ-1 ರವರಿಗೆ ಏನು ಕೆಲಸ ಬರುವುದಿಲ್ಲ ಏನಕ್ಕೆ ಸೇರಿಸಿಕೊಂಡಿದ್ದೀರಿ ಎಂದು ಹೇಳುತ್ತಿದ್ದರು. ಮಾಲೀಕರು ದೂರನ್ನು ಕೊಡುತ್ತೇವೆ ಎಂದು 1 ನೇ ಆರೋಪಿಗೆ ಬೆದರಿಸಿದ್ದರು. ನಂತರ 1 ನೇ ಆರೋಪಿಯೇ ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಚಾಸಾ-1 ರವರು ನನಗೆ ಹೆದರಿಸಿ ಬೆದರಿಕೆ ಹಾಕುತ್ತಿದ್ದಾರೆ ಅವರೆ ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದು ನಾನು ವಿಚ್ಛೇಧನ ಪಡೆಯುತ್ತೇನೆ ಎಂದು ಹೇಳಿದರು. ನಂತರ ಚಾಸಾ-1 ಮತ್ತು 1 ನೇ ಆರೋಪಿಯ ನಡುವೆ ವಿಚ್ಛೇಧನ ಆಗಿರುತ್ತದೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ರವರು ಆರೋಪಿಗಳ ವಿರುದ್ದ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಎಲ್ ಜಿ ಜಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಚಾ-1 ಹಾಗೂ 1 ನೇ ಆರೋಪಿಯು ಪ್ರೀತಿ ಮಾಡುತ್ತಿದ್ದ ವಿಚಾರವನ್ನು ಚಾಸಾ-1 ರವರೆ ನಿಮಗೆ ತಿಳಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ನಂತರ ನೀವು ಆರೋಪಿಗಳ ಬಗ್ಗೆ ವಿಚಾರ ಮಾಡಿ ಮದುವೆಗೆ ಒಪ್ಪಿರುತ್ತೀರಿ ಎಂದರೆ ಸಾಕ್ಷಿ ನಾವು ವಿಚಾರ ಮಾಡಿದ್ದಿರಲಿಲ್ಲವೆಂದು ನುಡಿಯುತ್ತಾರೆ. ನಿಶ್ಚಿತಾರ್ಥಕ್ಕೆ ಮೊದಲು ನೀವು ಆರೋಪಿಗಳ ಊರಾದ ಮಂಡ್ಯಕ್ಕೆ ಹೋಗಿದ್ದಿರ ಎಂದರೆ ಸಾಕ್ಷಿ ಹೋಗಿದ್ದೆವು ಆದರೆ ಆರೋಪಿಗಳು ಜ್ಯೋತಿಷಿಯವರ ಹತ್ತಿರ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ನಿಶ್ಚಿತಾರ್ಥ ಆದ ನಂತರ ವಿವಾಹವನ್ನು ಸರಳವಾಗಿ ಮಾಡಬೇಕ ಅಥವಾ ಅದ್ದೂರಿಯಾಗಿ ಮಾಡಬೇಕಾ ಎಂದು ತೀರ್ಮಾನ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕೋರೋನಾ ಕಾಲ ಇದ್ದಿದ್ದರಿಂದ ನೀವು ಹಾಗೂ ಆರೋಪಿಗಳು ಒಪ್ಪಿ ವಿವಾಹವನ್ನು ಸರವಾಗಿ ನೆರವೇರಿಸಲು ಒಪ್ಪಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಶ್ಚಿತಾರ್ಥದ ಮೊದಲು ನೀವು 1 ನೇ ಆರೋಪಿಗೆ ಚಾಸಾ-1 ರವರನ್ನು ಕೊಟ್ಟು ವಿವಾಹ ಮಾಡಬೇಕಾ ಅಥವಾ ಮಾಡಬಾರದೋ ಎಂದು ನಿರ್ಧರಿಸಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಕಾರಣದಿಂದಲೇ ನೀವು

ಯಾವುದೇ ತಯಾರಿ ಮಾಡಿದ್ದಿರಲಿಲ್ಲ ಎಂದರೆ ಸಾಕ್ಷಿ ದುಃಖದ ಮನೆ ಇದ್ದ ಕಾರಣ ಹೇಗೆ ಮಾಡುವುದು ಎಂದು ನುಡಿಯುತ್ತಾರೆ. ಆರೋಪಿಗಳು ಬೆಳ್ಳಿ ತಟ್ಟೆ ಮತ್ತು ಚೊಂಬು ಬೇಕು ಎಂದು ಹೇಳಿದ್ದರು ಎಂದು ಹೇಳಿದ್ದು ಸದರಿ ವಸ್ತುಗಳನ್ನು ತರಲು ಯಾರು ಯಾರು ಹೋಗಿದ್ದಿರಿ ಎಂದರ ಸಾಕ್ಷಿ ನಾನು, ನನ್ನ ಯಜಮಾನರು ಮತ್ತು ನನ್ನ ಮಗಳು ಮಾಗಡಿಯಲ್ಲೆ ಹೋಗಿದ್ದೆವು ಎಂದು ನುಡಿಯುತ್ತಾರೆ. ಸದರಿ ದಿನದಂದು ಬಂಗಾರವನ್ನು ಕರೀದಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಆರ್ಡರ್ ಕೊಟ್ಟು ಬಂದಿದ್ದೆವು ಎಂದು ನುಡಿಯುತ್ತಾರೆ. ಏನೇನು ಆರ್ಡರ್ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ನೆಕ್ಲೇಸ್ , ಹುಡುಗನಿಗೆ ಕೊರಳಿನ ಚೈನು ಮತ್ತು ಬ್ರಾಸ್ ಲೈಟ್ ಹಾಗೂ ಉಂಗುರ ಎಂದು ನುಡಿಯುತ್ತಾರೆ. ಸದರಿ ಅಂಗಡಿ ಎಲ್ಲಿ ಇದೆ ಎಂದರೆ ಸಾಕ್ಷಿ ಆರ್ ಆರ್ ರಸ್ತೆ ಯಲ್ಲಿ ಇರುವ ರಾಧಕೃಷ್ಣ ಜ್ಯೂಯಲರ್ಸ್ ? ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಸಮಯ ನೆನಪು ಇರುವುದಿಲ್ಲ ಆದರೆ ಬೆಳಿಗ್ಗೆ ಸಮಯದಲ್ಲಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಬಂಗಾರದ ಆಭರಣಗಳನ್ನು ಕರೀದಿ ಮಾಡಿದಾಗ ಬಿಲ್ ?ಅನ್ನು ಕೊಟ್ಟಿರುತ್ತಾರೆಯೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಏಪ್ರಿಲ್ 2020 ನೇ ಇಸವಿಯಿಂದ ಜುಲೈ 31 , 2020 ನೇ ಇಸವಿಯ ವೆರೆಗೆ ದೇಶದಲ್ಲಿ ಸಂಪೂರ್ಣ ಲಾಕ್ಡೌನ್ ಇದ್ದು ಯಾವುದೇ ಅಂಗಡಿಗಳು ತೆಗೆದಿದ್ದಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಲಾಕ್ ಡೌನ್ ಕ್ಲೋಸ್ ಆದ ನಂತರ ನೀವು ನಿಶ್ಚಿತಾರ್ಥ ಮಾಡಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ನೀವು ಯಾವುದೇ ಒಡವೆಗಳನ್ನು ಕರೀದಿ ಮಾಡಿದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ 3 ತಿಂಗಳಲ್ಲಿ ನೀವು, ನಿಮ್ಮ ಯಜಮಾನರು ಮತ್ತು ನಿಮ್ಮ ಮಗಳು ಯಾವುದೇ ಒಡವೆ ಅಂಗಡಿಗೆ ಹೋಗಿದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಪೋಲಿಸರು ನಿಮಗೆ ಇಂಥಹ ಸ್ಥ,ಳಕ್ಕೆ ಬಂದು ಹೇಳಿಕೆ ಕೊಡಿ ಎಂದು ಏನಾದರೂ ನೋಟೀಸ್ ಕೊಟ್ಟಿದ್ದರ ಎಂದರೆ ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರ ಮುಂದೆ ನೀವು ಏನು ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದು ನಿಮಗೆ ಗೊತ್ತಿರುತ್ತದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಅದು ನನ್ನ ಯಜಮಾನರು ಮತ್ತು ನನ್ನ ಯಜಮಾನರ ಅಕ್ಕನ ಮಗನವರಿಗೆ ಗೊತ್ತು ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ಯಜಮಾನರು ನಿಮ್ಮ ಸ್ವಾರ್ಥಕ್ಕೊಸ್ಕರ ಆರೋಪಿಗಳ ವಿರುದ್ದ ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ದೂರನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ನಿಮಗೆ ಯಾವುದೇ ವರದಕ್ಷಿಣೆಯನ್ನು ಕೇಳಿರುವುದಿಲ್ಲ ಹಾಗೂ ನೀವು ಆರೋಪಿಗಳಿಗೆ ಯಾವುದೇ ಒಡವೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯುು ವರದಕ್ಷಿಣೆ ಕೇಳಿರುತ್ತಾರೆ ಹಾಗೂ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ಇರುವ ಮನೆಯನ್ನು ಬರೆದುಕೊಡಿ ಎಂದು ಕೇಳಿರುವುದಿಲ್ಲ ಹಾಗೂ ಬೆಳಗುಂಭದಲ್ಲಿ ಇರುವ ಜಮೀನನ್ನು ಬರೆದುಕೊಡಿ ಎಂದು ಕೇಳಿರುವುದಿಲ್ಲ, ನೀವು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಕೇಳಿದ್ದರು ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಪಡೆಯುತ್ತಿರುವ ಸಂಬಳವನ್ನು ನೀವು ಹಾಗೂ ನಿಮ್ಮ ಯಜಮಾನರು ಲಪಟಾಯಿಸಲು ಕಥೆಯನ್ನು ಸೃಷಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು,ನಿಮ್ಮಯಜಮಾನರು ಹಾಗೂ ನಿಮ್ಮ ಮಗಳು 1 ನೇ ಆರೋಪಿಗೆ ಮಾನಸಿಕವಾಗಿ ಹಿಂಸೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಅವರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಾನಸಿಕ ಹಿಂಸೆ ಕೊಟ್ಟಿದ್ದರಿಂದ 1 ನೇಆರೋಪಿಯು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿಚ್ಛೆಧನಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅವರೆ ಹಾಕಿದ್ದರು ಎಂದು ನುಡಿಯುತ್ತಾರೆ. ಮಾಗಡಿಯಲ್ಲಿ ಗಲಾಟೆ ಆದರೂ ನೀವು

ಉದ್ದೇಶಪೂರ್ವಕವಾಗಿ ನೆಲಮಂಗಲದಲ್ಲಿ ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಕ್ಲಿನಿಕ್ ನಲ್ಲಿ ಗಲಾಟೆ ಮಾಡಿದ್ದರಿಂದ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

ನಿಮ್ಮ ಮಗಳು ಮಂಡ್ಯದಲ್ಲಿ ಇರುವ ಆರೋಪಿಗಳ ಮನೆಯಲ್ಲಿ ಎಂದಿಗೂ ವಾಸ ಇದ್ದಿರಲಿಲ್ಲ ಎಂದರೆ ಸಾಕ್ಷಿ ಹೋದಾಗ ವಾರಾನುಗಟ್ಟಲೆ ಹಾಗೂ ರಜ ಇದ್ದಾಗ ಅಲ್ಲೆ ವಾಸ ಇರುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**